ಕುಮಾರ ಚಲವಾದಿ, ಹಾಸನ

ಜೀವವಿರುವವರು ಚಲಿಸುತ್ತಾರೆ ಸರಿ. ಸತ್ತವರೂ ಚಲಿಸುತ್ತಾರಂತಲ್ಲಾ... ಏನಿರಬಹುದು?



ಎಫ್ಬಿ, ಟ್ವಿಟರ್‌ಗಳಲ್ಲಿ ಪೋಸ್ಟಿಂದ ಪೋಸ್ಟಿಂಗೆ, ಟ್ವೀಟಿಂದ ಟ್ವೀಟಿಗೆ 'ರಿಪ್' ಎನಿಸಿಕೊಳ್ಳುತ್ತಾ ಚಲಿಸುತ್ತಾರೆ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

ಪ್ರಶ್ನೆಯಲ್ಲೇ ಉತ್ತರ ನೀಡಿ ಪ್ರಶ್ನೆಯನ್ನೇ ಪ್ರಶ್ನೆಯಾಗಿಸುವ ನಿಮ್ಮ ಪೂರ್ವಜರು ಪ್ರಶ್ನಾಶಾಸ್ತ್ರ ಪಂಡಿತರಾಗಿದ್ದರೇ ರಾಮ್?

ಅಂಕಣದ ಪೂರ್ವಜರಂತೂ ಹೌದು. ಉತ್ತರಭೂಪ, ಚಿತ್ತಾ, ವೃಶ್ಚಿಕ, ಸಿಂಹರು ಪ್ರಶ್ನಾಶಾಸ್ತ್ರ ಕೋವಿದರೇ.

ಅಮರಯ್ಯಾ ಪತ್ರಿಮಠ, ಸುರಪುರ

ಅತ್ತೆಸೊಸೆ ಹೊಂದಾಣಿಕೆಯಿಂದ ಇರುವ ಸಂದರ್ಭ ಯಾವುದು?

ಆದರ್ಶ ಅತ್ತೆಸೊಸೆ ಸ್ಪರ್ಧೆಯ ಶೂಟಿಂಗ್ ಸಮಯ.

ನರಸಿಂಹ ಪೈ, ಹೊನ್ನಾವರ

ಮೊಬೈಲ್ ಮಕ್ಕಳಿಗೆ ವರವೋ, ಶಾಪವೋ?



ಪಾಠಕ್ಕಾಗಿ ಬಳಸಿದರೆ ವರ; ಚಟಕ್ಕಾಗಿ ಬಳಸಿದರೆ ಶಾಪ.

ಎ.ಕೆ. ಪಟ್ಟಾಭಿ, ಬೆಂಗಳೂರು

'ಆಲೋಹಮಯಂ ನಿಗಡಂ ಕಲತ್ರಂ' ಹೆಂಡತಿ ಎಂದರೆ ಲೋಹದಿಂದ ಮಾಡಿದ ಕೋಳವೆ ಎನ್ನುತ್ತದಲ್ಲಾ ಸುಭಾಷಿತ?

ನಿಜ. ಪತಿಯನ್ನು 'ಲೋ' ಎಂದು ಕರೆದು 'ಹ' ಎಂದು ಹಂಗಿಸಬಲ್ಲ 'ಲೋಹ'ವೇ ಹೆಂಡತಿ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ

ನಕ್ಕರೆ ಸ್ವರ್ಗ; ಅತ್ತರೆ ನರಕ. ಸತ್ತರೆ?

ಆಸ್ತಿ ಬಿಟ್ಟಿದ್ದರೆ ಸ್ವರ್ಗ; ಸಾಲ ಬಿಟ್ಟಿದ್ದರೆ ನರಕ.

ಎಂ.ಜಿ. ರುದ್ರಮೂರ್ತಿ, ಚಿತ್ರದುರ್ಗ

ಕೆಲವು ಬ್ಯಾಂಕ್ ಉದ್ಯೋಗಿಗಳಿಗೂ, ಹಾಸ್ಯಕ್ಕೂ ಬಹಳ ನಂಟು. ಕಾರಣ ಏನಿರಬಹುದು?

'ನಗದು' ಎಂದು ಕುಳಿತವುಗಳ ಗಂಟು ಬಿಡಿಸುವ ಅಭ್ಯಾಸ ಆಗಿರುತ್ತದಲ್ಲ.

ಮಹಾವೀರ ಕಾಸರ, ಶಿವಮೊಗ್ಗ

ಮದ್ಯವನ್ನು ಎಣ್ಣೆ ಎಂದೇಕೆ ಕರೆಯುತ್ತಾರೆ?

ತೈಲದಂತೆಯೇ ಒಮ್ಮೆ ಹಚ್ಚಿಕೊಂಡರೆ ತಲೆ ತೊಳೆದುಕೊಳ್ಳಲು ಬಹಳವೇ ಕಷ್ಟವಾಗುವುದರಿಂದ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ

ಚುನಾಯಿತ ಸರಕಾರಗಳು ಏಕೆ ನಿಲ್ಲುತ್ತಿಲ್ಲ?

'ಚುನಾಯಿತ' ಪದದಲ್ಲೇ 'ನಾಯಿ' ಇದೆಯಲ್ಲ! ಕಚ್ಚಾಟ ಇದ್ದಲ್ಲಿ ಸ್ಥಿರತೆ ಇರುವುದಿಲ್ಲ.

ಮಲ್ಲಿಕಾರ್ಜುನ ಬಗಲಿ, ಜತ್ತ

ಸಮುದ್ರ ಕೆಳಗಿದ್ದು, ಮೋಡಗಳು ಮೇಲಿವೆ. ಏಕೆ?

ಸಮುದ್ರ ಭಿಕ್ಷುಕ; ಮೋಡ ಜಲ ದಾನಿ. ದಾನದ ಕೈ (ನಶ್ಯದ ಹೊರತಾಗಿ) ಎಂದೂ ಮೇಲೆ.

ಪಿ.ಜಿ. ರಾಘವೇಂದ್ರ, ಮೈಸೂರು

ಬಿಗ್ ಬಾಸ್ ಸ್ಪರ್ಧಿಗಳನ್ನು ಗುಲಾಮರೆನ್ನಬಹುದಲ್ಲವೆ?

ಗುಲಾಮರಿಗಾದರೂ ಕೆಲಸವಿರುತ್ತದೆ. ಇದು ಖ್ಯಾತಿಗಾಗಿ ಹಪಹಪಿಸುವ ನರಪ್ರಾಣಿಗಳ ಮೃಗಾಲಯ.

ವಿ. ಹಮೀದ್, ವಿಟ್ಲ

ನಿಮಗೆ ಕನಸಿನಲ್ಲಿ ಯಮ ಬಂದರೆ ಏನು ಕೇಳುವಿರಿ ಸಾರ್?

ಕೇಳುವುದಿಲ್ಲ, ಹೇಳುತ್ತೇನೆ. ಇನ್ನಾದರೂ ಎಮ್ಮೆಯ ಬದಲು ಯಮಹಾ ತೆಗೆದುಕೊಳ್ಳಯ್ಯ ಎಂದು.

ಡಿ.ಎಲ್. ನಾಗರಾಜ್, ಬಳ್ಳಾರಿ

ಇಂದಿನ ಮದುವೆಗಳು ಕೇವಲ ಒಂದೇ ಊಟಕ್ಕೆ ಸೀಮಿತವಾಗಿವೆಯಲ್ಲಾ....?

ಇದೇ ವಾಸಿ. ಮುಂದಿನವು 'ಅಪ್ಪಾಸಾಮಿ ಕಲ್ಯಾಣ; ಅವರವರ ಮನೇಲೆ ಭೋಜನ; ತಮ್ಮೆವಾಲ್ಗ ಗುಡಿಯಲ್ಲಿ; ತಾಂಬೂಲ ಅಂಗ್ಡೀಲಿ'

## ಬಹುಮಾನಿತ ಪ್ರಶ್ನೆ

ರಮೇಶ್, ಹನುಮನಾಳು

ದೇವರ ವಿಗ್ರಹಗಳು ಭಿನ್ನವಾದರೆ ನದಿಗೆ ಬಿಡುವುದೇಕೆ?

ಅಪ್ಪವಸುಗಳಂತೆ ಇದೂ ಎಲ್ಲೋ ಹೋಗಿ ಉದ್ಧಾರವಾಗಲಿ ಎಂದು.

ಹರಿತಸ, ಬೆಂಗಳೂರು

ಧರ್ಮ ಮತ್ತು ರಾಜಕೀಯದಲ್ಲಿ ಮಾನವೀಯ ಮೌಲ್ಯಗಳು ಎಲ್ಲಿ ಹೆಚ್ಚು ಸಿಗಬಹುದು?

ಧರ್ಮಮಂದಿರಗಳ ಮೆಟ್ಟಿಲಲ್ಲಿ ಕುಳಿತ ಹಣ ಬಡವ, ಹೃದಯಶ್ರೀಮಂತ ಜನರಲ್ಲಿ.

ರಮಾನಂದ ಶರ್ಮಾ, ಬೆಂಗಳೂರು

ಪಾಕ್‌ನಲ್ಲಿ ಕೈದಿಯಾಗಿರುವ ಕುಲಭೂಷಣ್ ಜಾಧವ್ ಪರ ವಾದಿಸಲು ವಿಶ್ವನ್ಯಾಯಾಲಯಕ್ಕೆ ಸೀತಾರಾಂರನ್ನು ಕಳಿಸಿದರೆ ಹೇಗೆ?

ಆಗದು. 'ಮ' ಅಕ್ಷರದಿಂದ ಆರಂಭವಾಗದ ಯಾವುದೇ ಪ್ರಕರಣವನ್ನು ಕೈಗೆತ್ತಿಕೊಳ್ಳುವುದಿಲ್ಲ.

ಹೆಚ್.ಆರ್. ಪ್ರಕಾಶ್, ಹೊಸನಗರ

ಹುಡುಗಿಯರು ಹಣೆಗೆ ತಿಲಕ/ಸ್ಟಿಕ್ಕರ್ ಇಟ್ಟುಕೊಳ್ಳುವುದಿಲ್ಲ. ಆದರೆ ಹುಡುಗರು ಕುಂಕುಮ ಇಟ್ಟುಕೊಳ್ಳುತ್ತಾರಲ್ಲ...?



ಹುಡುಗಿಯರ ಹಣೆಬರಹ ನಿಚ್ಚಳ, ಹುಡುಗರದು ಆತಂಕಭರಿತ (ರೆಡ್ ಸಿಗ್ನಲ್) ಎಂದು ಸೂಚಿಸಲು.

ಬಿ. ಚಂದ್ರೇಗೌಡ, ಬೆಂಗಳೂರು

ನವ ವಿವಾಹಿತೆ ಗಂಡನ ಮನೆ ಪ್ರವೇಶಿಸುವುದಕ್ಕೂ, ಶಾಸಕರು ವಿಧಾನಸೌಧ ಪ್ರವೇಶಿಸುವುದಕ್ಕೂ ಏನು ವ್ಯತ್ಯಾಸ?

ಇದು ಮನೆ ತುಂಬಿಸಿಕೊಳ್ಳುವ ಶಾಸ್ತ್ರ; ಅದು ಮನೆ, ಬ್ಯಾಂಕ್, ಲಾಕರ್ ಎಲ್ಲವನ್ನೂ ತುಂತುಂತುಂತುಂಬಿಸಿಕೊಳ್ಳಲು ಅಸ್ತ್ರ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಎಲ್ಲರನ್ನು ನಗಿಸಲು ಮತ್ತು ಅಳಿಸಲು ದೇವರು ಕೈಕೊಳ್ಳುವ ಕ್ರಮವೇನು?

ಏನೇನೂ ಇಲ್ಲ. ನಾವೇ ಅನ್ಯರ ಏಳ್ಗೆ ಕಂಡಾಗ ಅಳುತ್ತೇವೆ, ಪತನವಾದಾಗ ನಗುತ್ತೇವೆ.

■ ರಾಮ್